# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪<br>Part – IV | ಬೆಂಗಳೂರು, ಶುಕ್ರವಾರ ,೨೦,ನವೆಂಬರ್, ೨೦೨೦(ಕಾರ್ತಿಕ, ೨೯, ಶಕವರ್ಷ ೧೯೪೨)<br>Bengaluru, FRIDAY, 20, NOVEMBER, 2020( Karthika,29, ShakaVarsha 1942) | ನಂ. ೫೬೮<br>No. 568 |
|---|---|---|


**<u>DEPARTMENT OF PARLIAMENTARY AFFAIRS AND LEGISLATION SECRETARIAT</u>**

**<u>NOTIFICATION</u>**

**<u>NO: DPAL 76 SHASANA 2020, BENGALURU, DATED:19.11.2020</u>**

The Karnataka Stamp (Amendment) Ordinance, 2020 ಇದಕ್ಕೆ 2020ರ ನವೆಂಬರ್ ತಿಂಗಳ 19ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 24 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

## KARNATAKA ORDINANCE NO. 24 OF 2020
## THE KARNATAKA STAMP (AMENDMENT) ORDINANCE, 2020

(Promulgated by the Governor of Karnataka in the Seventy first year of the Republic of India and first published in the Karnataka Gazette Extra-ordinary on the 19th day of November, 2020)

An Ordinance further to amend the Karnataka Stamp Act, 1957 (Karnataka Act No. 34 of 1957) and for the matters connected therewith or incidental thereto;

Whereas the Karnataka Legislative Assembly and the Karnataka Legislative Council are not in session and the Governor of Karnataka is satisfied that the circumstances exist which render it necessary for him to take immediate action to promulgate the Ordinance for the purposes hereinafter appearing;

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

**1. Short title and commencement**.– (1) This Ordinance may be called the Karnataka Stamp (Amendment) Ordinance, 2020.

(2) It shall come into force at once.

**2. Amendment of section 9**.- In the Karnataka Stamp Act, 1957, (Karnataka Act 34 of 1957) (hereinafter referred to as the principal Act) in section 9, in sub-section (1), in clause (a), after the last proviso, the following shall be inserted, namely:-

"Provided also that, the State Government may, in public interest, by notification, reduce or remit, the stamp duty payable on any instruments to be specified therein, executed by new and existing micro, small, medium enterprises (MSME) Large, Mega, Ultra Mega, Super Mega Enterprises including expansion, modernization and diversification project and in respect of any such projects as specified in the Karnataka Industrial Policy 2020-25 subject to production of certificate to that effect from the Director of Industries and Commerce."

**3. Amendment of schedule**.- In the schedule to the Principal Act, in article 20,-

(i) in clause (2), after the words "pertaining to premises of Flat" the words, figures and brackets "other than premises of Flat referred in clause (2A)" shall be inserted; and

(ii) after clause (2) and the entries relating thereto, the following shall be inserted, namely:-

| | |
|---|---|
| "(2A) where an instrument of conveyance relating to the first sale of flat or apartment, and,- | |
| (i) where the market value of which is rupees twenty lakhs or less than twenty lakhs. | two percent of the value |
| (ii) where the market value of which is above rupees twenty lakhs but upto and inclusive of thirty five lakhs. | three percent of the value |

**VAJUBHAI VALA**
**GOVERNOR OF KARNATAKA**

By Order and in the name of the
Governor of Karnataka

**(K. DWARAKANATH BABU)**
Secretary to Government
Department of Parliamentary Affairs and Legislation

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**
**ಅಧಿಸೂಚನೆ**
**ಸಂಖ್ಯೆ: ಸಂವ್ಯಶಾಇ 76 ಶಾಸನ 2020, ಬೆಂಗಳೂರು, ದಿನಾಂಕ:19.11.2020.**

The Karnataka Stamp (Amendment) Ordinance, 2020 ಇದಕ್ಕೆ 2020ರ ನವೆಂಬರ್ ತಿಂಗಳ 19ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 24 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2020ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 24**
**ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 2020**

(ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2020ರ ನವೆಂಬರ್ 19ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕ ವಿಷಯಗಳಿಗಾಗಿ ಒಂದು ಅಧ್ಯಾದೇಶ.

ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸಲು, ಶೀಘ್ರ ಕ್ರಮವನ್ನು ತೆಗೆದುಕೊಳ್ಳುವುದು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕದ ಮಾನ್ಯ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಈಗ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿದ್ದಾರೆ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧ್ಯಾದೇಶವನ್ನು ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 9ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 9ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎ) ಖಂಡದಲ್ಲಿ ಕೊನೆಯ ಪರಂತುಕದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಅಲ್ಲದೆ ಪರಂತು, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ, ಅಧಿಸೂಚನೆಯ ಮೂಲಕ, ವಿಸ್ತರಣೆ, ಆಧುನೀಕರಣ ಮತ್ತು ವೈವಿಧ್ಯೀಕರಣ ಪ್ರಾಜೆಕ್ಟ್‌ಗಳನ್ನು ಒಳಗೊಂಡಂತೆ ಹೊಸದಾದ ಮತ್ತು ಅಸ್ತಿತ್ವದಲ್ಲಿರುವ ಮೈಕ್ರೋ, ಸಣ್ಣ, ಮಧ್ಯಮ ಉದ್ಯಮಗಳು (MSME) ದೊಡ್ಡ, ಮೆಗಾ, ಅಲ್ಟ್ರಾ ಮೆಗಾ, ಸೂಪರ್ ಮೆಗಾ ಉದ್ಯಮಗಳು ಕಾರ್ಯಾಗತಗೊಳಿಸಿದ, 2020-25ರ ಕರ್ನಾಟಕ ಕೈಗಾರಿಕಾ ನೀತಿಯಲ್ಲಿ ನಿರ್ದಿಷ್ಟಪಡಿಸಿದಂತೆ ಯಾವುದೇ ಅಂಥ ಪ್ರಾಜೆಕ್ಟ್‌ಗಳ ಸಂಬಂಧದಲ್ಲಿ, ಅದರಲ್ಲಿ ನಿರ್ದಿಷ್ಟಪಡಿಸಬೇಕಾದ ಯಾವುದೇ ಲಿಖಿತಗಳ ಮೇಲೆ ಪಾವತಿಸಬೇಕಾದ ಸ್ಟಾಂಪು ಶುಲ್ಕವನ್ನು, ಕೈಗಾರಿಕೆಗಳ ಮತ್ತು ವಾಣಿಜ್ಯ ನಿರ್ದೇಶಕರಿಂದ, ಆ ಮಟ್ಟಿಗೆ ಪ್ರಮಾಣಪತ್ರವನ್ನು ಒದಗಿಸುವುದಕ್ಕೆ ಒಳಪಟ್ಟು, ಕಡಿಮೆಗೊಳಿಸಬಹುದು ಅಥವಾ ಮಾಫಿ ಮಾಡಬಹುದು."

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



**3. ಅನುಸೂಚಿಯ ತಿದ್ದುಪಡಿ.-** ಮೂಲ ಅಧಿನಿಯಮದ 20ನೇ ಅನುಚ್ಛೇಧದಲ್ಲಿ,-

(i) "(2)ನೇ ಖಂಡದಲ್ಲಿ "ಪ್ಲಾಟ್‌ನ ಆವರಣಕ್ಕೆ ಸಂಬಂಧಪಟ್ಟಂತೆ" ಎಂಬ ಪದಗಳ ತರುವಾಯ "(2ಎ) ಖಂಡದಲ್ಲಿ ಉಲ್ಲೇಖಿಸಿದ ಪ್ಲಾಟ್‌ನ ಆವರಣಗಳನ್ನು ಹೊರತುಪಡಿಸಿ" ಎಂಬ ಆವರಣ ಚಿಹ್ನೆಗಳು, ಅಂಕಿಗಳು ಮತ್ತು ಪದಗಳನ್ನು ಸೇರಿಸತಕ್ಕದ್ದು; ಮತ್ತು

(ii) (2)ನೇ ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

| | |
|---|---|
| "(2ಎ) ಪ್ಲಾಟ್ ಅಥವಾ ಅಪಾರ್ಟ್‌ಮೆಂಟ್‌ನ ಮೊದಲ ಮಾರಾಟಕ್ಕೆ ಸಂಬಂಧಿಸಿದ ಹಸ್ತಾಂತರ ಲಿಖಿತವಿದ್ದಲ್ಲಿ, ಮತ್ತು,- | |
| (i) ಮಾರುಕಟ್ಟೆ ಮೌಲ್ಯವು ಇಪ್ಪತ್ತು ಲಕ್ಷಗಳು ಅಥವಾ ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇದ್ದಲ್ಲಿ, | ಮೌಲ್ಯದ ಶೇಕಡ ಎರಡರಷ್ಟು |
| (ii) ಮಾರುಕಟ್ಟೆ ಮೌಲ್ಯವು ಇಪ್ಪತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿದ್ದು, ಆದರೆ ಮೂವತ್ತೈದು ಲಕ್ಷ ರೂಪಾಯಿಗಳವರೆಗೆ ಮತ್ತು ಅದನ್ನು ಒಳಗೊಂಡು ಇದ್ದಲ್ಲಿ | ಮೌಲ್ಯದ ಶೇಕಡ ಮೂರರಷ್ಟು" |

The above translation of the Karnataka Stamp (Amendment) Ordinance, 2020 (Karnataka Ordinance No. 24 of 2020) shall be authoritative text in the Kannada language under section 5-A of the Karnataka Official Language Act, 1963 (Karnataka Act 26 of 1963).

**ವಜೂಭಾಯಿ ವಾಲ**
**ಕರ್ನಾಟಕದ ರಾಜ್ಯಪಾಲರು**
ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE
Digitally signed by SUNIL GARDE
Date: 2020.11.20 13:15:19 +05'30'